ಓ ಎಸ್ ನಂ 49/2023

ಪಿ. ಡಬ್ಲ್ಯೂ ಃ 1

ದಿಃ26.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಆರ್ ಸಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ನಮ್ಮ ಕುಟುಂಬದ ವಂಶವೃಕ್ಷದ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ಕ್ರಿ.ಮಿಸ್ 95/2021 ರ ಆರ್ಡರ್ ಶೀಟ್ , ಅರ್ಜಿ ಮತ್ತು ಪ್ರತಿ ಅರ್ಜಿಯ ದೃಢೀಕೃತ ನಕಲನ್ನು ನಿ ಪಿ 2 ಎಂದು, ಎಂ ಸಿ 15/2020 ರ ಆರ್ಡರ್ ಶೀಟ್ , ಅರ್ಜಿ ಮತ್ತು ಪ್ರತಿ ಅರ್ಜಿಯ ದೃಢೀಕೃತ ನಕಲನ್ನು ನಿ ಪಿ 3 ಎಂದು, ಸಿ ಪಿ 28/2021 ರಲ್ಲಿ ಆಗಿರುವ ಆದೇಶದ ಪ್ರತಿಯನ್ನು ನಿ ಪಿ 4 ಎಂದು, ಎರಡು ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 5 ಮತ್ತು ನಿ ಪಿ 6 ಎಂದು ದಿನಾಂಕ ಃ 22.02.2006 ರ ಶುದ್ದ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು, ದಿನಾಂಕಃ 07.11.2019 ರ ದಾನಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 8 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.